ಅಧಿಸೂಚನೆಯನ್ನು ನೀಡಲಾಗಿದೆ. ಹಾಗೂ ದಿ:25/26.11.2006 ರಂದು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದೆ. ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಉಳಿದ 143 ಹುದ್ದೆಗಳನ್ನು ಬಡ್ತಿ ಮುಖಾಂತರ ಭರ್ತಿ ಮಾಡಲು ಆಸ್ಪದ ಇದೆ.

998 (1116) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ 3,4,5 ಮತ್ತು 6ನೇ ಹಂತದಲ್ಲಿ ಮಂಜೂರಾಗಿರುವ ಗ್ರಾಮೀಣ ರಸ್ತೆಗಳ ಸಂಖ್ಯೆ ಎಷ್ಟು; (ರಾಜ್ಯದ ಜಿಲ್ಲಾವಾರು ಹಾಗೂ ರಾಯಚೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒಟ್ಟು ಕೇಂದ್ರ ಸರ್ಕಾರ ಮಂಜೂರು ಮಾಡಿದ ಹಣದ ಮೊತ್ತವೆಷ್ಟು; ಖರ್ಚಾದ ಮೊತ್ತವೆಷ್ಟು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ 3,4,5 ಮತ್ತು 6ನೇ ಹಂತದಲ್ಲಿ ಕ್ರಮವಾಗಿ 360,90,179 ಮತ್ತು 177 ಸಂಖ್ಯೆಯ ಗ್ರಾಮೀಣ ರಸ್ತೆಗಳು ಮಂಜೂರಾಗಿರುತ್ತವೆ. ರಾಜ್ಯದ ಜಿಲ್ಲಾವಾರು ಮತ್ತು ರಾಯಚೂರು ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2ರಲ್ಲಿ ನೀಡಲಾಗಿದೆ.

ಆ) ಹಂತ–3 ರಿಂದ ಹಂತ–6ರವರೆಗಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒಟ್ಟು ಕೇಂದ್ರ ಸರ್ಕಾರ ಮಂಜೂರು ಮಾಡಿದ ಹಣದ ಮೊತ್ತ ಮತ್ತು ಖರ್ಚಾದ ಮೊತ್ತವನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರಮ ಸಂಖ್ಯೆ	ಹಂತ	ಮಂಜೂರಾದ ಮೊತ್ತ (ರೂ.ಕೋಟಿಗಳಲ್ಲಿ)	ವೆಚ್ಚ (ರೂ. ಕೋಟಿಗಳಲ್ಲಿ)
1.	ಹಂತ–3	118.27	100.24
2.	ಹಂತ–4	101.17	23.80
3.	ಹಂತ–5	202.53	33.92
4.	ಹಂತ–6	330.72	ಟೆಂಡರ್ ಕರೆಯಲಾಗಿದೆ

ಅನುಬಂಧ–1

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಹಂತ–3 ರಿಂದ 6ರವರೆಗೆ ಮಂಜೂರಾದ ಗ್ರಾಮೀಣ ರಸ್ತೆಗಳ ಕಾಮಗಾರಿಗಳ ಸಂಖ್ಯೆಗಳ ವಿವರಗಳು

ಕ್ರ. ಸಂ.	ಜಿಲ್ಲೆ	ಹಂತ–3	ಹಂತ–4	ಹಂತ–5	ಹಂತ–6
1.	ಬಾಗಲಕೋಟೆ	9	1	4	0
2.	ಬೆಂಗಳೂರು (ಗ್ರಾಮಾಂತರ)	23	5	8	20
3.	ಬೆಂಗಳೂರು (ನಗರ)	7	0	1	5
4.	ಬೆಳಗಾಂ	22	6	6	8
5.	ಬಳ್ಳಾರಿ	9	3	5	0
6.	ಬೀದರ್	9	2	9	7
7.	ಬಿಜಾಪುರ	7	5	5	1
8.	ಚಾಮರಾಜನಗರ	7	3	6	2
9.	ಚಿಕ್ಕಮಗಳೂರು	12	2	6	0
10.	ಚಿತ್ರದುರ್ಗ	10	2	12	6
11.	ದ.ಕನ್ನಡ	11	1	4	22
12.	ದಾವಣಗೆರೆ	19	5	7	1
13.	ಧಾರವಾಡ	7	3	7	1
14.	ಗದಗ	6	1	1	1
15.	ಗುಲ್ಬರ್ಗಾ	15	8	19	12
16.	ಹಾಸನ	24	4	2	0
17.	ಹಾವೇರಿ	13	3	8	2

ಕ್ರ. ಸಂ.	ಜಿಲ್ಲೆ	ಹಂತ–3	ಹಂತ–4	ಹಂತ–5	ಹಂತ–6
18.	ಕೊಡಗು	5	0	0	2
19.	ಕೋಲಾರ	30	2	16	23
20.	ಕೊಪ್ಪಳ	10	4	7	5
21.	ಮಂಡ್ಯ	18	3	5	11
22.	ಮೈಸೂರು	14	6	10	8
23.	ರಾಯಚೂರು	9	5	15	12
24.	ಶಿವಮೊಗ್ಗ	19	5	1	8
25.	ತುಮಕೂರು	28	4	10	13
26.	ಉಡುಪಿ	5	4	4	6
27.	ಉ.ಕನ್ನಡ	12	3	1	1
		360	**90**	**179**	**177**

ಅನುಬಂಧ–2

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಹಂತ–3 ರಿಂದ ಹಂತ–6 ರವರೆಗಿನ ರಾಯಚೂರು ಜಿಲ್ಲೆಯ ತಾಲ್ಲೂಕುವಾರು ಮಂಜೂರಾದ ಕಾಮಗಾರಿಗಳ ವಿವರ

ಕ್ರ. ಸಂ.	ತಾಲ್ಲೂಕು	ಹಂತ–3	ಹಂತ–4	ಹಂತ–5	ಹಂತ–6
1.	ದೇವದುರ್ಗ	2	2	2	3
2.	ಲಿಂಗಸುಗೂರು	1		2	1
3.	ಮಾನ್ವಿ	2	2	4	
4.	ರಾಯಚೂರು	2	1	2	3
5.	ಸಿಂಧನೂರು	2		5	5
	ಒಟ್ಟು	**9**	**5**	**15**	**12**